# ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಸಂಖ್ಯೆ: ಕುಸ : ಡಿಪ್ಲೋಮಾ : ಪ್ರವೇಶ : 2010-11

ಕುಲಸಚಿವರ ಕಾರ್ಯಾಲಯ,
ಕೃಷಿನಗರ, ಧಾರವಾಡ–೫೮೦ ೦೦೫,
ದಿನಾಂಕ: 14.07.2010.

## ಅಧಿಸೂಚನೆ

ಶೈಕ್ಷಣಿಕ ವರ್ಷ **2010-11** ನೇ ಸಾಲಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಈ ಕೆಳಕಂಡ ಡಿಪ್ಲೋಮಾ/ಸರ್ಟಿಫಿಕೇಟ ಕೋರ್ಸುಗಳ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅ. ಡಿಪ್ಲೋಮಾ ಕೋರ್ಸುಗಳು (2 ಸೆಮಿಸ್ಟರಗಳ ಒಂದು ವರ್ಷ)**

**1.** ಸಾವಯವ ಕೃಷಿ
**2.** ಬೀಜೋತ್ಪಾದನೆ
**3.** ಸಮಗ್ರ ಕೃಷಿ
**4.** ಸಸ್ಯ ಸಂರಕ್ಷಣೆ
**5.** ಫ್ಯಾಷನ್ ಮತ್ತು ಉಡುಪು ವಿನ್ಯಾಸ
**6.** ಪುಷ್ಪಾಲಂಕಾರ ಹಾಗೂ ಗ್ರಾಹಕ ಉತ್ಪನ್ನಗಳು

**ಬ. ಸರ್ಟಿಫಿಕೇಟ ಕೋರ್ಸುಗಳು (3–ತಿಂಗಳು)**

**1.** ಹೈನುಗಾರಿಕೆ
**2.** ಕೋಳಿ ಸಾಕಾಣಿಕೆ

**ಅರ್ಹತೆ :** ಈ ಮೇಲಿನ ಡಿಪ್ಲೋಮಾ/ಸರ್ಟಿಫಿಕೇಟ ಕೋರ್ಸುಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಹಾಗೂ ರೋಷ್ಟರ್ ಪದ್ದತಿ ಆಧರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಎಲ್ಲ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ ಕೋರ್ಸುಗಳಿಗೆ ಪ್ರವೇಶದ ಅರ್ಜಿ ಹಾಗೂ ವಿವರಣಾ ಪತ್ರಿಕೆಯನ್ನು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವೆಬ್‌ಸೈಟ್ **www.uasd.edu** ದಲ್ಲಿ ಅಥವಾ ಖುದ್ದಾಗಿ **ಕುಲಸಚಿವರ ಕಾರ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಧಾರವಾಡ,** ಇಲ್ಲಿ ಡಿ.ಡಿ. ಮುಖಾಂತರ ಅರ್ಜಿ ಶುಲ್ಕ ಸಲ್ಲಿಸಿ ಪಡೆಯಬಹುದು.

ಅಂಚೆಯ ಮೂಲಕ ಅರ್ಜಿ ನಮೂನೆಯನ್ನು ಪಡೆಯುವವರು ಕೋರಿಕೆ ಪತ್ರದೊಂದಿಗೆ ಅರ್ಜಿ ಶುಲ್ಕದ ಡಿ.ಡಿ. ಹಾಗೂ ರೂ. **30/–**ರ ಅಂಚೆ ಚೀಟಿ ಲಗತ್ತಿಸಿದ **23** ಸೆಂ.ಮಿ. ಉದ್ದ **15** ಸೆಂ.ಮಿ. ಅಗಲ ಅಳತೆಯ ಸ್ವವಿಳಾಸವುಳ್ಳ ಲಕೋಟೆಯನ್ನು **ಕುಲಸಚಿವರು, ಕೃಷಿ ನಗರ, ಕೃಷಿ ವಿಶ್ವವಿದ್ಯಾಲಯ, ಧಾರವಾಡ–೫** ಇವರಿಗೆ ಕಳುಹಿಸಿ ಪಡೆಯಬಹುದು.

.......2.

**ಅರ್ಜಿ ಶುಲ್ಕ :** ಸಾಮಾನ್ಯ/ಇತರೆ ವರ್ಗಗಳ ಅಭ್ಯರ್ಥಿಗಳಿಗೆ ರೂ. **150=೦೦** ಹಾಗೂ ಪ.ಜಾ./ಪ.ಪ/ವರ್ಗ-**1** ವರ್ಗಗಳ ಅಭ್ಯರ್ಥಿಗಳಿಗೆ ರೂ. **50** (ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಸಲ್ಲಿಸಬೇಕು). ಅರ್ಜಿ ಶುಲ್ಕದ ಡಿ.ಡಿಯನ್ನು **"ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಧಾರವಾಡ (ಧಾರವಾಡದಲ್ಲಿ ಸಂದಾಯವಾಗುವಂತೆ)"** ಇವರ ಹೆಸರಿನಲ್ಲಿ ಈ ಅಧಿಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. ವೆಬ್ ಸೈಟ್ ಮೂಲಕ ಅರ್ಜಿ ಹಾಗೂ ವಿವರಣಾ ಪತ್ರಿಕೆಯನ್ನು ಪಡೆದುಕೊಂಡವರು ಭರ್ತಿಮಾಡಿದ ಅರ್ಜಿ ಜೊತೆಗೆ ಮೇಲೆ ತಿಳಿಸಿದಂತೆ ಅರ್ಜಿ ಶುಲ್ಕವನ್ನು ಡಿ.ಡಿ. ಮುಖಾಂತರ ಲಗತ್ತಿಸಿ ಕಳುಹಿಸಬೇಕು.

**ಅರ್ಜಿ ವಿತರಿಸುವ ದಿನಾಂಕ : 15-7-2010 ರಿಂದ 7-8-2010**

**ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ : 7-8-2010**

**ಕೌನ್ಸಲಿಂಗ ದಿನಾಂಕ : 18-8-2010 (ಕೌನ್ಸಲಿಂಗ ದಿನಾಂಕದ ಕುರಿತು ಪ್ರತ್ಯೇಕ ಸೂಚನೆಯನ್ನು ಕಳುಹಿಸಲಾಗುವುದಿಲ್ಲ).**

**ಮೊದಲನೇ ಸೆಮಿಸ್ಟರ ಪ್ರಾರಂಭವಾಗುವ ದಿನಾಂಕ : 23-8-2010**

**ಡಿಪ್ಲೋಮಾ ಕೋರ್ಸುಗಳಿಗೆ ಪ್ರತಿ ಸೆಮಿಸ್ಟರಿನ ನಿಗದಿತ ಶುಲ್ಕ :** ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ರೂ. **5000=00**, ಪ.ಜಾ./ಪ.ಪ/ವರ್ಗ-**1** ವರ್ಗಗಳ ಅಭ್ಯರ್ಥಿಗಳಿಗೆ ರೂ. **1250=00** ಹಾಗೂ ಇತರೆ ವರ್ಗಗಳ ಅಭ್ಯರ್ಥಿಗಳಿಗೆ (**2**ಎ, **2**ಬಿ, **3**ಎ, **3**ಬಿ) ರೂ. **3700=00**.

- ಸರ್ಟಿಫಿಕೇಟ ಕೋರ್ಸುಗಳಿಗೆ ಎಲ್ಲ ವರ್ಗದ ಅಭ್ಯರ್ಥಿಗಳಿಗೆ ರೂ. **3000/-**ಶುಲ್ಕ ನಿಗದಿಮಾಡಿರುವುದು.

- **ಕೌನ್ಸಲಿಂಗ ದಿನದಂದು ಪರಿಶೀಲನೆ ನಂತರ ಆಯ್ಕೆಯಾದ ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕವನ್ನು ಆ ದಿನವೇ ಸಂದಾಯಮಾಡಬೇಕು.** ಭರ್ತಿಮಾಡಿದ ಅರ್ಜಿಯನ್ನು ಎಲ್ಲ ಅವಶ್ಯಕ ದಾಖಲೆಗಳೊಂದಿಗೆ **ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಎತ್ತಿನಗುಡ್ಡ ಆವರಣ, ಕೃಷಿನಗರ, ಧಾರವಾಡ-580 005** ಇವರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾದ **7-8-2010** ರೊಳಗಾಗಿ ಸಲ್ಲಿಸಬೇಕು. ತಡವಾಗಿ ಬಂದ ಹಾಗೂ ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಂಚೆಯ ವಿಳಂಬಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರವಾಗುವುದಿಲ್ಲ.

.......3.

ಡಿಪ್ಲೋಮಾ/ಸರ್ಟಿಫಿಕೇಟ ಕೋರ್ಸುಗಳ ಪ್ರವೇಶಗಳು ಸರ್ಕಾರದ ಆದೇಶಗಳು/ಕೃಷಿ ವಿಶ್ವವಿದ್ಯಾಲಯದ ಕಾಯ್ದೆ/ಅಧಿನಿಯಮ ಹಾಗೂ ನಿಯಮಾವಳಿಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರಗಳನ್ನು **ಮಾಹಿತಿ ಪತ್ರಿಕೆ –2010** ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್: **www.uasd.edu** ದಲ್ಲಿ ಪಡೆಯಬಹುದು.

**(ಹೆಚ್. ಎಸ್. ವಿಜಯಕುಮಾರ)**
**ಕುಲಸಚಿವರು**